**ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ,**
**ವಿರಾಜಪೇಟೆ**
***ಸಿ.ಸಿ.ನಂ : 348/2018***

**ಡಿಡಬ್ಲ್ಯು- *1***

***ದಿನಾಂಕ : 08-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

**ಮುಂದುವರೆದ ಪಾಟಿ ಸವಾಲು : ಮಾನ್ಯ *ಸ.ಸ.ಅ.* ರವರಿಂದ.**

ನಮ್ಮ ನಮೋಸ್ಕೋ ಇಂಟರ್ ನ್ಯಾಷನಲ್ ಟ್ರೇಡರ್ಸ್ ಅಂಡ್ ಎಕ್ಸ್ ಪೋರ್ಟ್ ಸಂಸ್ಥೆಯು ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವ್ಯವಹಾರ ಮಾಡುವ ಸಂಸ್ಥೆ ಎಂದರೆ ಸರಿ. ಸದರಿ ಕಂಪನಿಗೆ ನನ್ನ ಜೊತೆ ಬೇರೆಯವರು ಸಹ ಪಾಲುದಾರರು ಇದ್ದಾರೆ ಎಂದರೆ ಸರಿ. ನಮ್ಮ ಅಂಗಡಿಯಲ್ಲಿ ಮೂರು ರೂಮುಗಳಿದ್ದು, ಗೋಡೌನ್ ಬೇರೆ ಇರುತ್ತದೆ. ಸದರಿ ಗೋಡೌನ್ ನ ಸುತ್ತಳತೆ 5000 ಚದರ ಅಡಿ ಇರುತ್ತದೆ. ನಮ್ಮ ಅಗಂಡಿ ಹಾಗೂ ಗೋಡೌನ್ ನಲ್ಲ ಸಿಸಿ ಟಿ ವಿ ಅಳವಡಿಸಿರುತ್ತೇವೆ. ಪೋಲಿಸರು ರಾತ್ರಿ ವೇಳೆ ನಮ್ಮ ಅಗಂಡಿಗೆ ಬಂದು ಒಳ್ಳೆಯ ಮೆಣಸನ್ನು ಅಮಾನತ್ತು ಮಾಡಿರುತ್ತಾರೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಆ ವಿಚಾರ ಸಿಸಿ ಟಿವಿಯಲ್ಲಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಸಿಸಿ ಟಿವಿ ಸರಿ ಇತ್ತೋ ಇಲ್ಲವೋ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಿಸಿ ಟಿವಿಯು ಯಾವಾಗಲು ಆನ್ ಆಗಿ ಕಾರ್ಯ ನಿರ್ವಹಿಸುತ್ತಿರುತ್ತದೆ ಎಂದರೆ ಸರಿ. ನಾನು ಸಿಸಿ ಟಿವಿ ಫೂಟೇಜ್‌ನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಅಮಾನತ್ತು ಸಮಯದಲ್ಲೆ ಪೋಲಿಸರು ವೀಡಿಯೋ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪೋಲಿಸರು ನನ್ನ ಸಮಕ್ಷಮದಲ್ಲಿ ಮಹಜರ ಮಾಡಿ ಸದರಿ ಒಳ್ಳೆಯ ಮೆಣಸನ್ನು ಅಮಾನತ್ತು ಮಾಡಿ ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಪೋಲಿಸರು ಮಹಜರನ್ನು ಮರುದಿನ ಮಾಡಿರಬಹುದು ಎಂದು ನುಡಿಯುತ್ತಾರೆ. ನಿಪಿ 4 ರಿಂದ 8 ಛಾಯಾಚಿತ್ರಗಳನ್ನು ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳಾಗಿವೆ ಎಂದರೆ ಸರಿಯಲ್ಲ. ಸದರಿ ಮಹಜರನ್ನು ಹಗಲು ವೇಳೆಯಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ 06-07-2017 ರ ರಾತ್ರಿ 11 ಗಂಟೆಗೆ ಸದರಿ ಒಳ್ಳೆಯ ಮೆಣಸನ್ನು ಅಮಾನತ್ತುಪಡಿಸಿ ಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಹಗಲು

ತೆಗೆದ ಫೋಟಕ್ಕೂ ಹಾಗೂ ರಾತ್ರಿ ವೇಳೆಯಲ್ಲಿ ತೆಗೆದ ಫೋಟೋಕ್ಕೂ ವ್ಯತ್ಯಾಸ ಗೊತ್ತಾಗುತ್ತದೆ ಎಂದರೆ ಸರಿ. ನಿಪಿ4 ರಿಂದ 6 ಫೋಟೋದಲ್ಲಿರುವ ವ್ಯಕ್ತಿಗಳು ನಮ್ಮ ಸಂಸ್ಥೆಯ ಸಿಬ್ಬಂದಿಗಳು ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಗೆ ಲೀಗಲ್ ಅಡ್ ವೈಸರ್ ಇರುವುದಿಲ್ಲ.

1ನೇ ಆರೋಪಿ ಸುಮಾರು ನಾಲ್ಕು ವರ್ಷಗಳಿಂದ ಪರಿಚಿತನಾಗಿರುತ್ತಾನೆ. ಅವರ ಹಾಗೂ ನನ್ನ ನಡುವೆ ಯಾವುದೇ ವೈಯಕ್ತಿಯ ಭಿನ್ನಾಬಿಪ್ರಾಯವಿರುವುದಿಲ್ಲ. ಅದೇ ರೀತಿ ಸಿದ್ದಾಪುರ ಪೋಲಿಸರಿಗೆ ಯಾವುದೇ ವೈಯಕ್ತಿಕ ದ್ವೇಷವಿರುವುದಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-36 ರವರು ನಮ್ಮ ಸಂಸ್ಥೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಮಾಲ್ದಾರೆ ಕೃಷಿ ಪತ್ತಿನ ಸೊಸೈಟಿಯಲ್ಲಿ ಸದಸ್ಯನಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಆ ಸಂಸ್ಥೆಯಲ್ಲಿ ಠೇವಣಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪೋಲಿಸರು ನಮ್ಮ ಅಂಗಡಿಯ ಹತ್ತಿರ ಪ್ರಥಮವಾಗಿ ದಿನಾಂಕ 06-07-2017 ರ ಸಂಜೆ 4 ಗಂಟೆಗೆ ಬಂದಿರುತ್ತಾರೆ. ಪೋಲಿಸ್ ಬಂದ ಸಮಯದಲ್ಲಿ ನಾನು ಇದ್ದಿದ್ದೆ. ಪೋಲಿಸರು ಒತ್ತಾಯ ಪೂರ್ವಕವಾಗಿ ಒಳ್ಳೆಯ ಮೆಣಸನ್ನು ತೆಗೆದುಕೊಂಡು ಹೋಗಿರುತ್ತಾರೆಂದು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದು, ಆ ಬಗ್ಗೆ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಆ ರೀತಿ ಒಳ್ಳೆಯ ಮೆಣಸನ್ನು ತೆಗೆದುಕೊಂಡು ಹೋದ ಬಗ್ಗೆ ಪೋಲಿಸರ ವಿರುದ್ಧ ಯಾವುದೇ ಖಾಸಗಿ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ಆ ರೀತಿ ದೂರು ಕೊಡಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಸದರಿ ಒಳ್ಳೆಯ ಮೆಣಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ನಮಗೆ ಹಿಂತಿರುಗಿಸುವುದಾಗಿ ತಿಳಿಸಿದ್ದರಿಂದ ಆ ರೀತಿ ದೂರು ಕೊಟಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಡಿ2 ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಸಹಪಾಲುದಾರನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಪದವಿ ವ್ಯಾಸಂಗ ಮಾಡಿರುತ್ತೇನೆ. ನಮ್ಮ ಗೋಡೌನ್ ನಲ್ಲಿ ಶೇಖರಿಸಿರುವ ಒಳ್ಳೆಯ ಮೆಣಸಿನ ವಿವರಗಳು ನಮ್ಮ ಬಳಿ ಇದ್ದಿದ್ದು ಅದನ್ನು ಪೋಲಿಸರಿಗೆ ನೀಡಿರುತ್ತೇನೆ. ನಾನು ಬೇರೆಯವರಿಂದ ಒಳ್ಳೆಯ ಮೆಣಸನ್ನು ಖರೀದಿ ಮಾಡಿದಾಗ ಆ ಬಗ್ಗೆ ರಶೀತಿ ನೀಡುತ್ತೇವೆ ಎಂದರೆ ಸರಿ. 104 ಚೀಲ ಒಳ್ಳೆಯ ಮೆಣಸನ್ನು ಯಾರಿಂದ ಖರೀದಿಸಿದ್ದೀರಾ ಎಂಬ ಬಗ್ಗೆ ದಾಖಲೆಯನ್ನು

ನೀಡಿದ್ದೀರಾ ಎಂದರೆ ಸರಿಯಲ್ಲ. ಸದರಿ 104 ಚೀಲ ಒಳ್ಳೆಯ ಮೆಣಸು ಕಳ್ಳತನ ಮಾಡಿ ಅಕ್ರಮವಾಗಿ ಶೇಖರಿಸಿ ಇಟ್ಟುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮಗೆ ಒಳ್ಳೆಯ ಮೆಣಸನ್ನು ಖರೀದಿಸಲು ಯಾವುದೇ ಪರವಾನಗಿ ಇರುವುದಿಲ್ಲ ಹಾಗೂ 1 ನೇ ಆರೋಪಿ ಜೊತೆ ಶಾಮೀಲಾಗಿ ಮಾಲ್ದಾರೆ ಕೃಷಿ ಪತ್ತಿನ ಸಂಘಕ್ಕೆ ಸೇರಿದ 104 ಚೀಲಗಳನ್ನು ಒಳ್ಳೆಯ ಮೆಣಸನ್ನು ಅಕ್ರಮವಾಗಿ ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಡಿ 1 ರಿಂದ 6 ದಾಖಲೆಗಳು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಯಿಂದ ಅಕ್ರಮವಾಗಿ ಒಳ್ಳೆಯ ಮೆಣಸನ್ನು ಖರೀದಿ ಮಾಡಿ ನನ್ನ ಗೋಡೌನ್ ನಲ್ಲಿ ಶೇಖರಿಸಿಕೊಟ್ಟಿದ್ದರಿಂದ ಪೋಲಿಸರು ಅದನ್ನು ಅಮಾನತ್ತು ಮಾಡಿದ್ದರಿಂದ ಆ ಬಗ್ಗೆ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ದಿನಾಂಕ 07-07-2017 ರಂದು ನಮ್ಮ ಗೋಡೌನ್ ಬಳಿ ಬಂದು ಮಹಜರ ಕ್ರಮ ಜರುಗಿಸಿ ಅದನ್ನು ಅಮಾನತ್ತುಪಡಿಸಿಕೊಂಡಿದ್ದು ಆದರೆ ನಾನು 1 ನೇ ಆರೋಪಿಯ ಜೊತೆ ಶಾಮೀಲಾಗಿ ಪೋಲಿಸರು ದಿನಾಂಕ 06-07-2017 ರಂದು ರಾತ್ರಿ ಒಳ್ಳೆಯ ಮೆಣಸನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ಹಾಗೂ 3 ನೇ ಆರೋಪಿಗಳ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮಾನ್ಯ ಸ ಸ ಅ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.